[Type text]

ಕರ್ನಾಟಕ ಸರ್ಕಾರ

# ಉಪನಿರ್ದೇಶಕರ ಕಾರ್ಯಾಲಯ ಶಾಲಾ ಶಿಕ್ಷಣ ಇಲಾಖೆ ವಿಜಯನಗರ ಜಿಲ್ಲೆ, ಹೊಸಪೇಟೆ

ಸಂಖ್ಯೆ: ಇ5/ಎಸ್.ಎಸ್.ಎಲ್.ಸಿ./ಮೌ.ಮೂ.ವಿ.ಕಾ/ನಡಾವಳಿ/01/2022-23 ದಿನಾಂಕ : 05/04/2023

**-: ಜ್ಞಾಪನಾ :-**

**ವಿಷಯ :- ದಿನಾಂಕ 05/04/2023 ರಂದು ನಡೆದ ಎಸ್.ಎಸ್.ಎಲ್.ಸಿ. ಮೌಲ್ಯಮಾಪನ 2023 ರ ಪೂರ್ವಭಾವಿ ವಿಡಿಯೋ ಕಾನ್ಫರೆನ್ಸ್ ಸಭೆಯ ನಡಾವಳಿಯನ್ನು ಕಡ್ಡಾಯವಾಗಿ ಪಾಲಿಸುವ ಬಗ್ಗೆ.**

**ಉಲ್ಲೇಖ:- ಮಾನ್ಯ ಅಧ್ಯಕ್ಷರು ಹಾಗೂ ನಿರ್ದೇಶಕರು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಬೆಂಗಳೂರು ರವರ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಸೂಚಿಸಿದಂತೆ**

***********

ಈ ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ದಿನಾಂಕ 05/04/2023 ರಂದು ನಡೆದ ಎಸ್.ಎಸ್.ಎಲ್.ಸಿ. ಮೌಲ್ಯಮಾಪನ 2023 ರ ಪೂರ್ವಭಾವಿ ವಿಡಿಯೋ ಕಾನ್ಫರೆನ್ಸ್ ಸಭೆಯ ಮುಖ್ಯಾಂಶಗಳನ್ನು ವಿಜಯನಗರ ಜಿಲ್ಲಾ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ನೋಡಲ್ ಅಧಿಕಾರಿಗಳು, ಕ್ಯಾಂಪ್ ಕಸ್ಟೋಡಿಯನ್‌ಗಳು ಹಾಗೂ ಮೌಲ್ಯಮಾಪಕರು ಕಡ್ಡಾಯವಾಗಿ ಪಾಲಿಸಲು ಸೂಚಿಸಿದೆ.

**ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಹಾಜರಿದ್ದವರು :**

1) ಮಾನ್ಯ ಅಧ್ಯಕ್ಷರು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಬೆಂಗಳೂರು
2) ಮಾನ್ಯ ನಿರ್ದೇಶಕರು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಬೆಂಗಳೂರು
3) ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ
4) ಎಲ್ಲಾ ಜಿಲ್ಲೆಗಳ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ

**ವಿಡಿಯೋ ಕಾನ್ಫರೆನ್ಸ್ ಸಭೆಯ ಮುಖ್ಯಾಂಶಗಳು :**

1) ಎಲ್ಲಾ ಮೌಲ್ಯಮಾಪನ ಕೇಂದ್ರಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸುವುದು.
2) ಅಗತ್ಯಕ್ಕೆ ತಕ್ಕಂತೆ ಎಲ್ಲಾ ಮೌಲ್ಯಮಾಪನ ಕೇಂದ್ರಗಳಲ್ಲಿ ಕನಿಷ್ಠ 10 ಕಂಪ್ಯೂಟರ್‌ಗಳಿರುವಂತೆ ಕ್ರಮವಹಿಸುವುದು
3) ಟಾಲ್ ಶಾಲೆಗಳಿಂದ ಲ್ಯಾಪ್‌ಟಾಪ್‌ಗಳನ್ನು ಪಡೆಯಲು ಕ್ರಮವಹಿಸುವುದು
4) ಪ್ರತಿಯೊಂದು ಮೌಲ್ಯಮಾಪನ ಕೇಂದ್ರದಲ್ಲಿ ಮಾರ್ಕ್ ಪೋರ್ಟ್ ಎಂಟ್ರಿ ಮಾಡಲು ಇಂಟರ್ನೆಟ್ ವ್ಯವಸ್ಥೆ ಮಾಡುವುದು.
5) ರಾಜ್ಯದಲ್ಲಿ ಒಟ್ಟು 237 ಮೌಲ್ಯಮಾಪನ ಕೇಂದ್ರಗಳಿವೆ
6) ಪ್ರತಿಯೊಂದು ಮೌಲ್ಯಮಾಪನ ಕೇಂದ್ರದಲ್ಲಿ ಮೂಲಭೂತ ಸೌಲಭ್ಯಗಳು, ಇಂಟರ್ನೆಟ್, ಯುಪಿಎಸ್ ಬ್ಯಾಟರಿ, ಐಪಿ ಅಡ್ರೆಸ್ ವ್ಯವಸ್ಥೆ ಇರುವ ಬಗ್ಗೆ ಖಾತ್ರಿಪಡಿಸಿಕೊಂಡು ದಿನಾಂಕ 13.4.2023 ರಂದು ಸಂಜೆ 5 ರಿಂದ 6 ಗಂಟೆವರೆಗೆ ನಡೆಯುವ ಜೂಮ್ ವಿಡಿಯೋ ಕಾನ್ಫರೆನ್ಸ್ ಸಭೆಗೆ ಹಾಜರಾಗಿ ವರದಿಯನ್ನು ಸಲ್ಲಿಸಲು ಸೂಚಿಸಿದರು.
7) ಕ್ಯಾಂಪ್ ಕಸ್ಟೋಡಿಯನ್‌ಗಳು ತಮಗೆ ನಿಯೋಜಿಸಿದ ಮೌಲ್ಯಮಾಪನ ಕೇಂದ್ರಕ್ಕೆ ಭೇಟಿ ನೀಡಿ ಇಂಟರ್ನೆಟ್ ಸ್ಪೀಡ್, ಮೌಲ್ಯಮಾಪಕರ ಸಂಖ್ಯೆ, ಯುಪಿಎಸ್ ಬ್ಯಾಟರಿ, ತಮ್ಮ ಕೇಂದ್ರಕ್ಕೆ ಬರುವ ಉತ್ತರ ಪತ್ರಿಕೆಗಳ ಸಂಖ್ಯೆ ಕುರಿತು ಮಾಹಿತಿಯೊಂದಿಗೆ ಸಭೆಗೆ ಹಾಜರಾಗುವುದು
8) ಮಾರ್ಕ್ ಪೋರ್ಟ್ ಮಾಡುವುದು ಎಲ್ಲಾ ಮೌಲ್ಯಮಾಪಕರ ಜವಾಬ್ದಾರಿಯಾಗಿರುತ್ತದೆ. ಯಾವುದೇ ಡಾಟಾ ಎಂಟ್ರಿ ಆಪರೇಟರ್ ಗಳಿಂದ ಮಾರ್ಕ್ ಪೋರ್ಟ್ ಮಾಡಿಸದಂತೆ ಕ್ರಮವಹಿಸುವುದು. ಈ ಸಂದರ್ಭದಲ್ಲಿ ಡಿಸಿ, ಜಂಟಿ ಡಿಸಿಗಳು ಪರಿಶೀಲಿಸಿ ಮಾರ್ಕ್ ಪೋರ್ಟ್ ಎಂಟ್ರಿ ಮಾಡಿಸಲು ಕ್ರಮ ವಹಿಸುವುದು.
9) ಮುಂದಿನ ವಾರ ಎಲ್ಲಾ ಪ್ರೌಢಶಾಲೆಗಳ ಮುಖ್ಯ ಗುರುಗಳ ಲಾಗಿನ್‌ಗೆ ಮೌಲ್ಯಮಾಪನ ಆದೇಶ ಪ್ರತಿಗಳನ್ನು ಜನರೇಟ್ ಮಾಡಲಾಗುವುದು. ಸದರಿ ಆದೇಶ ಪ್ರತಿಗಳನ್ನು ನೋಂದಣಿ ಮಾಡಿದ ಶಿಕ್ಷಕರಿಗೆ ಜಾರಿ ಮಾಡಿ ಕಡ್ಡಾಯವಾಗಿ ಮೌಲ್ಯಮಾಪನ ಕೇಂದ್ರಕ್ಕೆ ಹಾಜರಾಗುವಂತೆ ಕ್ರಮವಹಿಸುವುದು.
10) ಮೌಲ್ಯಮಾಪನದ ಪ್ರಾರಂಭದ ದಿನಾಂಕದಿಂದ ಬೆಳಗ್ಗೆ 9.00 ಗಂಟೆಗೆ ಕಡ್ಡಾಯವಾಗಿ ಎಲ್ಲಾ ಮೌಲ್ಯಮಾಪನ ಕ್ಯಾಂಪ್ ಕಸ್ಟೋಡಿಯನ್‌ಗಳು ಮಂಡಳಿಗೆ ಹಾಜರಾತಿಯನ್ನು ವರದಿ ಮಾಡಲು ಸೂಚಿಸಿದರು.
11) ಒಂದು ವೇಳೆ ತಮ್ಮ ಜಿಲ್ಲೆಯಲ್ಲಿ ಚುನಾವಣಾ ತರಬೇತಿಗಳು ಇದ್ದರೆ ಮಾತ್ರ ವಿನಾಯತಿಯನ್ನು ನೀಡಲಾಗುವುದು. ಸದರಿ ತರಬೇತಿ ಇರುವ ಬಗ್ಗೆ ಜಿಲ್ಲಾಧಿಕಾರಿಗಳ ಕಛೇರಿಯಿಂದ ಖಾತ್ರಿಪಡಿಸಿಕೊಂಡು ಮುಂಚಿತವಾಗಿಯೇ ಮಂಡಳಿಗೆ ವರದಿಯನ್ನು ಮಾಡಲು ಸೂಚಿಸಿದರು.
12) ಮೌಲ್ಯಮಾಪಕರು ಮೌಲ್ಯಮಾಪನ ಕರ್ತವ್ಯದಿಂದ ತಪ್ಪಿಸಿಕೊಳ್ಳಲು ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಲ್ಲಿಸುವರು. ಅಂತಹ ಶಿಕ್ಷಕರ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ಸಮಸ್ಯೆ ಇರುವ ಬಗ್ಗೆ ಖಾತ್ರಿಪಡಿಸಿಕೊಂಡು ವಿನಾಯತಿ ನೀಡಲು ಸೂಚಿಸಿದರು.
13) ಎಲ್ಲಾ ಜಿಲ್ಲೆಯ ಉಪನಿರ್ದೇಶಕರುಗಳು ಪರೀಕ್ಷಾ ಮಂಡಳಿಯ ರಾಯಭಾರಿಯಾಗಿ ಜವಾಬ್ದಾರಿ ನಿರ್ವಹಿಸಲು ಸೂಚಿಸಿದರು.

Kiran Raghapathi

14) ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಮೌಲ್ಯಮಾಪನ ಸಿಬ್ಬಂದಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿಗೂ ಪ್ರವೇಶ ಇರುವುದಿಲ್ಲ.
15) ಮಾಧ್ಯಮದವರಿಗೆ, ರಾಜಕಾರಣಿಗಳಿಗೆ, ಸಾರ್ವಜನಿಕರಿಗೆ, ಸಂಘ ಸಂಸ್ಥೆಯವರಿಗೆ ಹಾಗೂ ಬೇರೆ ಇಲಾಖೆ ಅಧಿಕಾರಿಗಳಿಗೆ ಮೌಲ್ಯಮಾಪನ ಕೇಂದ್ರಕ್ಕೆ ಪ್ರವೇಶವನ್ನು ನಿರ್ಬಂಧಿಸಿದೆ.
16) ಮಾನ್ಯ ಮುಖ್ಯಮಂತ್ರಿಗಳು, ಸರ್ಕಾರದ ಸಚಿವರುಗಳು, ವಿಧಾನಪರಿಷತ್ತಿನ ಸದಸ್ಯರುಗಳು, ಜಿಲ್ಲಾ ಪಂಚಾಯತಿ ಹಾಗೂ ತಾಲೂಕ ಪಂಚಾಯಿತಿ ಸದಸ್ಯರುಗಳಿಗೆ ಹಾಗೂ ಪತ್ರಕರ್ತರಿಗೆ ಪ್ರವೇಶ ಇರುವುದಿಲ್ಲ.
17) **ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಮಾತ್ರ ಪ್ರವೇಶಕ್ಕೆ ಅನುಮತಿ ನೀಡುವುದು.**
18) ಮೌಲ್ಯಮಾಪನ ಕೇಂದ್ರಗಳಲ್ಲಿ ಯಾವುದೇ ದಾನಿಗಳಿಂದ ಹಾಗೂ ಯಾವುದೇ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಂದ ಊಟ, ಟೀ, ಕಾಫಿ ಹಾಗೂ ತಂಪು ಪಾನೀಯಗಳನ್ನು ವ್ಯವಸ್ಥೆ ಮಾಡಲು ಅವಕಾಶವನ್ನು ನೀಡಬಾರದು.
19) ಹೆರಿಗೆ ರಜೆ ಮೇಲೆ ಇರುವವರ ಬಗ್ಗೆ ವಿಚಿತಪಡಿಸಿಕೊಂಡು, ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಮಾತ್ರ ಮೌಲ್ಯಮಾಪನ ಕರ್ತವ್ಯದಿಂದ ವಿನಾಯಿತಿ ನೀಡಲು ತಮ್ಮ ವಿವೇಚಾನುಸಾರ ನಿರ್ಧಾರ ತೆಗೆದುಕೊಳ್ಳಲು ಸೂಚಿಸಿದರು.
20) ಮೌಲ್ಯಮಾಪನ ಕೇಂದ್ರದ ಎಲ್ಲಾ ಶಿಕ್ಷಕರು ಊಟದ ವ್ಯವಸ್ಥೆಗಾಗಿ ಕ್ಯಾಟರಿನ್ ಮೂಲಕ ಊಟವನ್ನು ಪೂರೈಸಿಕೊಳ್ಳಲು ಅವಕಾಶ ನೀಡಬಹುದು.
21) ವಿಜಯನಗರ ಜಿಲ್ಲೆಗೆ 60ಹೆಚ್ ಹೊಸದಾಗಿ ಕೊಟ್ಟಿರುವ ಕಾರಣ ಪ್ರತ್ಯೇಕವಾಗಿ ಐಪಿ ವಿಳಾಸವನ್ನು ಪಡೆದುಕೊಳ್ಳಲು ವ್ಯವಸ್ಥೆ ಮಾಡುವುದು.
22) ವಿಜಯನಗರ ಜಿಲ್ಲೆಯಲ್ಲಿ ಒಟ್ಟು 1698 ಶಿಕ್ಷಕರು ಮೌಲ್ಯಮಾಪನ ಕರ್ತವ್ಯಕ್ಕೆ ನೊಂದಣಿಯಾಗಿದ್ದು, ನೋಂದಣಿ ಆದ ಎಲ್ಲಾ ಶಿಕ್ಷಕರು ಕಡ್ಡಾಯವಾಗಿ ಮೌಲ್ಯಮಾಪನ ಕರ್ತವ್ಯಕ್ಕೆ ಹಾಜರಾಗುವಂತೆ ಎಲ್ಲಾ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚನೆಯನ್ನು ನೀಡಲು ತಿಳಿಸಿದರು.
23) ರಾಜ್ಯಾದ್ಯಾಂತ ಏಕಕಾಲಕ್ಕೆ ದಿನಾಂಕ 21.04.2023ರಿಂದ ಮೌಲ್ಯಮಾಪನ ಕಾರ್ಯಗಳು ಪ್ರಾರಂಭವಾಗುತ್ತಿವೆ ಎಂದು ತಿಳಿಸುತ್ತಾ ಅಗತ್ಯ ಕ್ರಮ ವಹಿಸಲು ಸೂಚಿಸಿದರು.

**ಈ ಮೇಲೆ ತಿಳಿಸಿದ 23 ಅಂಶಗಳನ್ನು, ಎಲ್ಲಾ ಮೌಲ್ಯಮಾಪನ ಕೇಂದ್ರದವರು ಕಡ್ಡಾಯವಾಗಿ ಪಾಲಿಸುತ್ತಾ, ತಮ್ಮ ಶಾಲೆಗಳ ಮೌಲ್ಯಮಾಪಕರಿಗೆ ಮನವರಿಕೆ ಮಾಡಲು ಸೂಚಿಸಿದೆ. ಆದಾಗ್ಯೂ, ಯಾವುದಾದರೂ ಮೌಲ್ಯಮಾಪನ ಕೇಂದ್ರಗಳಲ್ಲಿ ಲೋಪದೋಷಗಳು ಕಂಡು ಬಂದಲ್ಲಿ ಪರೀಕ್ಷಾ ಮಂಡಳಿಯ ನಿರ್ದೇಶನದಂತೆ ಕ್ಯಾಂಪ್ ಕಸ್ಟೋಡಿಯನ್‌ಗಳನ್ನು ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮಕ್ಕೆ ವರದಿ ಮಾಡಲಾಗುವುದು.**

(Signature) 5/4/23

ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ
ವಿಜಯನಗರ ಜಿಲ್ಲೆ ಹೊಸಪೇಟೆ

ಇವರಿಗೆ

1. ವಿಜಯನಗರ ಜಿಲ್ಲೆಯ ಎಲ್ಲಾ ಶಿಕ್ಷಣಾಧಿಕಾರಿಗಳ ರವರ ಸೂಕ್ತ ಕ್ರಮಕ್ಕಾಗಿ
2. ವಿಜಯನಗರ ಜಿಲ್ಲೆಯ ಮೌಲ್ಯಮಾಪನ ಕೇಂದ್ರಗಳ ಮುಖ್ಯಸ್ಥರ ಮುಂದಿನ ಕ್ರಮಕ್ಕಾಗಿ

ಮಾಹಿತಿಗಾಗಿ:-

1. ಮಾನ್ಯ ಜಿಲ್ಲಾಧಿಕಾರಿಗಳು ವಿಜಯನಗರ ಜಿಲ್ಲೆ ಇವರಿಗೆ ಗೌರವ ಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಕಾರ್ಯನಿರ್ವಾಹಕರು ಜಿಲ್ಲಾ ಪಂಚಾಯಿತಿ ವಿಜಯನಗರ ಜಿಲ್ಲೆ ಇವರಿಗೆ ಗೌರವ ಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ನಿರ್ದೇಶಕರು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಬೆಂಗಳೂರು ಇವರಿಗೆ ಗೌರವ ಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.

Kiran Raghupathi